**Q.P. Code – 32303**

# Third Semester B.A./B.S.W./B.V.A./B.F.A. Degree Examination, October/November 2019

*(CBCS – Semester Scheme)*

**ಕನ್ನಡ ಭಾಷೆ**

## Paper III – ವಿಚಾರ ಸಂಚಯ – 3, ಕಾದಂಬರಿ : ಬೆಳ್ಳಿ ಮೋಡ

*Time : 3 Hours]* *[Max. Marks : 90*

ಭಾಗ – 1

ಕಾದಂಬರಿ : ಬೆಳ್ಳಿ ಮೋಡ

I. (ಅ) **ಒಂದರ ಸ್ವಾರಸ್ಯವನ್ನು ವಿವರಿಸಿ :** **(1 × 5 = 5)**

1. ಇಂದಿರ ಮಾತನಾಡದೆ ಆಗಾಗ್ಗೆ ಕಾಫಿ ಗಿಡಗಳ ಬೇಡವಾದ ಕೊಂಬೆಗಳನ್ನು ಕತ್ತಿಯಿಂದ ಸವರುತ್ತಾ ನಡೆದಿದ್ದಳು. ಮೊದಲ ಸಲ ಅತಿಥಿಯಾಗಿ ಬಂದಿದ್ದ ವ್ಯಕ್ತಿ ಈ ದಿನ ಭಾವಿ ಪತಿಯಾಗಿ ಅವಳೊಡನಿದ್ದ. ಮೋಹನನೂ ಬಹಳ ಹೊತ್ತು ಮಾತನಾಡಲಿಲ್ಲ. ಬೆಟ್ಟದ ಏರು, ತಗ್ಗುಗಳಲ್ಲಿ ಅಭ್ಯಾಸವಿಲ್ಲದ ಮೋಹನ ಆಗಾಗ್ಗೆ ಜಾರಿತ್ತಿದ್ದ. ಒಂದು ಸಲ ಜಾರಿ ಬೀಳುವುದರಲ್ಲಿದ್ದ ಮೋಹನ ಇಂದಿರೆಯ ತೋಳನ್ನು ಬಿಗಿಯಾಗಿ ಹಿಡಿದು ನಿಂತ. ಮೋಹನ ತೋಳು ಹಿಡಿದು ತನ್ನ ಕಡೆ ಸ್ವಲ್ಪ ಎಳೆದ ಕೂಡಲೇ ಇಂದಿರ ಒಂದು ಕೈಯಿಂದ ಅವನನ್ನು ಹಿಡಿದು ನಿಲ್ಲಿಸಿದಳು.

2. "ನಾನು ಎಂದೂ ಯಾವಾಗಲೂ ನಿಮ್ಮನ್ನು ಹಿಡಿದಿಡಲು ಪ್ರಯತ್ನಿಸಲಿಲ್ಲ. ನನ್ನ ತಂದೆಯ ಹಿಡಿತದಿಂದ ಪಾರಾಗಲು ನಿಮಗಿರುವ ದಾರಿ ಇದೊಂದೇ. ಆಗ ನೀವು ಮಾತ್ರ ತಪ್ಪೆಲ್ಲವೂ ನನ್ನದು ಎನ್ನುವಂತೆ ವರ್ತಿಸಿ. ನನ್ನನ್ನು ಮದುವೆ ಮಾಡಿಕೊಳ್ಳಲು ಆತುರವಿರುವಂತೆ ಅಭಿನಯಿಸಿ. ನನ್ನನ್ನೂ ಬಿಟ್ಟು ಹೋಗುವುದು ನಿಮಗೆ ತುಂಬಾ ಕಷ್ಟಕರವಾಗಿದೆ ಎಂಬ ಆಟ ಹೂಡಿ. ಒಟ್ಟಿನಲ್ಲಿ ನಾಯಿಕೆಯಿಂದ ತಿರಸ್ಕರಿಸಲ್ಪಟ್ಟು ಪ್ರಣಯ ಭಂಗ ಹೊಂದಿದ ದುರಂತ ನಾಯಕ ನೀವಾಗಬೇಕು".

(ಆ) **ಎರಡನ್ನು ಸಂದರ್ಭ ಸಹಿತ ವಿವರಿಸಿ :** **(2 × 3 = 6)**

1. "ನಮ್ಮ ಬೆಳ್ಳಿ ಮೋಡದ ಮಿನುಗುತಾರೆಯೆಂದರೆ ಈ ಹುಡುಗಿ ನೋಡಿ".
2. "ಮದುವೆ ಮುಗಿಸಿ ನೀನೂ ಅವರ ಜೊತೆ ಹೋಗಬಹುದು".
3. "ನೀವು ಹುಷಾರಾದ ಕೂಡಲೇ ಹೋಗುವಿರಂತೆ".

SIDDAGANGA COLLEGE OF ARTS, SCIENCE & COMMERCE TUMKUR. LIBRARY & INFORMATION CENTRE Page No ------- Date -------

(ಇ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಇಂದಿರ ತೋಟಕ್ಕೆ ಹೋದಾಗ ಸದಾ ಅವಳ ಕೈಯಲ್ಲಿರುತ್ತಿದ್ದ ವಸ್ತು ಯಾವುದು?
2. ಮೋಹನರಾಯರು ವಿದೇಶಕ್ಕೆ ಹೋಗಲು ಕಾರಣವೇನು?
3. ಇಂದಿರಾಳ ಗೆಳತಿಯ ಹೆಸರೇನು?
4. ಮೋಹನ ಇಂದಿರಾಳಿಂದ ಕಲಿತ ಆಟಗಳಾವುವು?
5. ಸುಬ್ಬಣ್ಣನ ಹೆಂಡತಿಯ ಹೆಸರೇನು?

(ಈ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 2 = 4)**

1. ಬೆಳ್ಳಿಮೋಡ
2. ತ್ರಿವೇಣಿ
3. ಬೋಮ

II. (ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ : **(2 × 5 = 10)**

1. ಲಲಿತಮ್ಮನ ಸಾವಿನ ಸಂದರ್ಭ
2. ಮೋಹನನಿಗೆ ಇಂದಿರಾ ಮಾಡಿದ ಶುಶ್ರೂಷೆ
3. ಮೋಹನನ ತಂದೆ-ತಾಯಿಗಳು

(ಆ) ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಮದುವೆ ನಿರಾಕರಿಸಿದ ನಂತರ ಮೋಹನ ಮತ್ತು ಇಂದಿರಾಳ ವರ್ತನೆಗಳನ್ನು ಕುರಿತು ಬರೆಯಿರಿ.
2. ಕಾದಂಬರಿಯಲ್ಲಿ ಇಂದಿರಾಳ ವ್ಯಕ್ತಿತ್ವ ಹೇಗೆ ಮೂಡಿಬಂದಿದೆ? ವಿವರಿಸಿ.
3. ಲಲಿತ, ಪುಟ್ಟಯ್ಯ, ಸದಾಶಿವರಾಯ – ಇಬ್ಬರ ಪಾತ್ರವನ್ನು ಪರಿಚಯಿಸಿ.

## ಭಾಗ – 2

## ವಿಚಾರ ಸಂಚಯ – 3

III. (ಅ) ಒಂದರ ಸಾರಸ್ಯವನ್ನು ವಿವರಿಸಿ : **(1 × 5 = 5)**

1. ಮೌನ ಮಂದಿರದಲ್ಲಿ ಧ್ಯಾನದೇಕಾಂತದಲ್ಲಿ ಭಗವಂತನ ದಿವ್ಯ ಸಾನಿಧ್ಯ ಗೋಚರಿಸುತ್ತದೆ ಎಂಬುದು ಆತ್ಮಶ್ರೀ ಸಾಧಕರೆಲ್ಲರ ಅನುಭವವಾಗಿದೆ. ಆತ್ಮಶ್ರೀಯನ್ನು ಬಯಸುವ ವಿದ್ಯಾರ್ಥಿ ಆ ಮೌನ, ಆ ಧ್ಯಾನ, ಆ ಏಕಾಂತತೆಗಳನ್ನು ತಕ್ಕ ಮಟ್ಟಿಗಾದರೂ ಆಶ್ರಯಿಸಲೇ ಬೇಕು, ವಿಜ್ಞಾನಿ ಪ್ರಯೋಗ ಶಾಲೆಯನ್ನು ಆಶ್ರಯಿಸುವಂತೆ.

2. ಇನ್ನೊಂದು ಕಡೆಗೆ ಜಾಗತೀಕರಣವು ನಮ್ಮ ಮನಸ್ಸು ಹಾಗೂ ಆತ್ಮಗಳನ್ನು ಪ್ರವೇಶಿಸಿ ಬಟ್ಟಿದೆ. ಅಂತರಾಷ್ಟ್ರೀಯ ಬಂಡವಾಳವನ್ನು ನೇರವಾಗಿ ಎದುರಿಸಿ ಸೋಲಿಸುವ ಸಾಮರ್ಥ್ಯ ನಮ್ಮ ಜನ ಸಮುದಾಯಗಳಿಗೆ ಇಲ್ಲ ಆದ್ದರಿಂದಲೇ ಗಾಂಧಿಯವರ ಅಹಿಂಸಾತ್ಮಕ ಸತ್ಯಾಗ್ರಹದ ಸಾಧ್ಯತೆಗಳನ್ನು ಬಹಳ ವಿಭಿನ್ನವಾಗಿ ಪರಿಶೀಲಿಸಬೇಕಾಗಿದೆ. ಆದರ ಅದಕ್ಕಿಂತ ಮೊದಲು ಗಾಂಧಿ ಕಟ್ಟಿಕೊಟ್ಟ ಆಧುನಿಕ ನಾಗರೀಕತೆಯ ವಿರೋಧವನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳ ಬೇಕಾಗಿದೆ.

(ಆ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. 'ವಿದ್ಯಾರ್ಥಿಗಳಿಗೇಕೆ ಆತ್ಮಶ್ರೀ' ಲೇಖನದ ಕರ್ತೃ ಯಾರು?
2. ತುರ್ತು ಪರಿಸ್ಥಿತಿಯನ್ನು ಘೋಷಿಸಿದ ವರ್ಷ ಯಾವುದು?
3. ದೇವನೂರ ಮಹಾದೇವ ಅವರು ದಲಿತರು ಹೋಟೆಲ್ ಪ್ರವೇಶಿಸುವ ವಿಚಾರವನ್ನು ಯಾರೊಂದಿಗೆ ಚರ್ಚಿಸುವರು?
4. 'ಗಾಂಧಿ ಚಿಂತನೆ' ಲೇಖನವನ್ನು ಬರೆದವರು ಯಾರು?
5. 'ಹಿಂದ್ ಸ್ವರಾಜ್' – ಇದು ಯಾರು ಬರೆದ ಕೃತಿ?

(ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಮಾತಿನ ಮಾಲಿನ್ಯ
2. ದೇವನೂರು ಮಹಾದೇವ
3. ಕೆ.ವಿ. ಸುಬ್ಬಣ್ಣ

IV. **ಎರಡು** ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ರಾಕ್ಷಸತ್ವವನ್ನು ಕುರಿತ ಅಡಿಗರ ಚಿಂತನೆಗಳನ್ನು ಸಂಗ್ರಹಿಸಿ ಬರೆಯಿರಿ.
2. 'ಅನಿಷ್ಟ ಪದ್ಧತಿಯ ವಿರುದ್ಧ' ಲೇಖನದಲ್ಲಿನ ವಿಚಾರಗಳನ್ನು ಚರ್ಚೆ ಮಾಡಿರಿ.
3. ಅಣು ಯುದ್ಧದ ಪರಿಣಾಮಗಳ ಕುರಿತ ನಾಗೇಶ ಹೆಗಡೆಯವರ ಅಭಿಪ್ರಾಯಗಳೇನು? ವಿವರಿಸಿ.

---

SREE SIDDAGANGA COLLEGE OF ARTS, SCIENCE & COMMERCE FOR WOMEN
TUMKUR.
LIBRARY & INFORMATION CENTRE
Page No.........
Date..........